ಈ.ಪಿ. ಸಂ.: 01/2024 ಪಿ.ಡಬ್ಲ್ಯೂ.1

ದಿ: 05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಶ್ರೀ ಸಿ.ವಿ.ಕೆ. ವಕೀಲರಿಂದ:-**

1. ನನಗೆ ಕನ್ನಡ ಹಾಗೂ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ವಾರ್ಡ್ ನಂ.27, ಹೆಬ್ಬಗೋಡಿಯ ಮತದಾರರ ಪಟ್ಟಿಯನ್ನು ನಾನು ನನ್ನ ನಾಮಪತ್ರ ಸಲ್ಲಿಸುವ ಪೂರ್ವದಲ್ಲಿ ಪರಿಶೀಲಿಸಿದ್ದೇನೆ. ನಾನು ಉಪಚುನಾವಣೆಗೆ ಸ್ಪರ್ಧಿಸಿದ್ದೆ ಎಂದರೆ ಸರಿ. ಚುನಾವಣೆ ನಡೆದಾಗ ಇದ್ದ ಮತದಾರರ ಪಟ್ಟಿಯೇ ಉಪ ಚುನಾವಣೆಗೆ ಸಹ ಇತ್ತು ಎಂದರೆ ಸರಿ. ಉಪಚುನಾವಣೆಗೆ ನಾನು ಹಾಗೂ 1ನೇ ಪ್ರತಿವಾದಿ ಮಾತ್ರ ಸ್ಪರ್ಧಿಸಿದ್ದೆವು. ನಾನು ಕಳೆದ ಸುಮಾರು 12 ವರ್ಷಗಳಿಂದ ವಾರ್ಡ್ ಸಂ.:27 ಹೆಬ್ಬಗೋಡಿ ವ್ಯಾಪ್ತಿಯಲ್ಲಿ ವಾಸವಿರುತ್ತೇನೆ.

ನಾನು ಸ್ಪರ್ಧಿಸಿದ್ದ ಉಪಚುನಾವಣೆ ಸಂಬಂಧ ಮೊದಲಿಗೆ 2021ರಲ್ಲಿ ಚುನಾವಣೆ ನಡೆದಿತ್ತು. 2024ರಲ್ಲಿ ಉಪಚುನಾವಣೆ ನಡೆದಿರುತ್ತದೆ. ಮೊದಲಿಗೆ ಚುನಾವಣೆಯಲ್ಲಿ ನನ್ನ ಅತ್ತೆ ಜಯಶೀಲರಾಗಿದ್ದರು. ಆಕೆ ಮೃತಪಟ್ಟ ಕಾರಣ ಉಪಚುನಾವಣೆ ನಡೆದಿರುತ್ತದೆ. 2021ರ ಚುನಾವಣೆ ಸಂಬಂಧ ಯಾವುದೇ ಅಭ್ಯರ್ಥಿಗಳ ತಕರಾರು ಇರಲಿಲ್ಲ ಎಂದರೆ ಸರಿ. ಉಪಚುನಾವಣೆಯಲ್ಲಿ ಕೇವಲ ವಾರ್ಡ್ ಸಂ.:27ರ ಮತದಾರರನ್ನು ಸೇರಿಸದೇ ಇತರೆ ವಾರ್ಡ್ ನ ಮತದಾರರನ್ನು ಸಹ ಸೇರಿಸಿ ಚುನಾವಣೆ ನಡೆದಿರುವ ಕಾರಣ ನಾನು ಈ ಅರ್ಜಿ ಸಲ್ಲಿಸಿರುತ್ತೇನೆ. ಆ ಸಂಬಂಧ ಚುನಾವಣೆಯ ಪೂರ್ವದಲ್ಲಿ ನಾನು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಅಕ್ರಮದ ಸಂಬಂಧ ನಾನು ಚುನಾವಣೆ ಪೂರ್ವದಲ್ಲಿ ಎಲ್ಲಿಯೂ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಮತದಾರರ ಪಟ್ಟಿ ಸರಿ ಇದ್ದ ಕಾರಣ ನಾನು ಆ ರೀತಿ ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಉಪಚುನಾವಣೆಯಲ್ಲಿ ವಾರ್ಡ್ ಸಂ.:27ರ ಮತದಾರರಲ್ಲದೇ ಇತರೆ ವಾರ್ಡ್ ನ ಮತದಾರರನ್ನು ಸೇರಿಸಲಾಗಿತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. 2021ರ ಚುನಾವಣೆಯಲ್ಲಿ ಒಟ್ಟು ಎಷ್ಟು ಜನ ಮತದಾರರು ಇದ್ದರು ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ಸದರಿ ಮತದಾರರ ಪಟ್ಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2024ರ ಉಪಚುನಾವಣೆಯಲ್ಲಿ ನಿಖರವಾಗಿ ಎಷ್ಟು ಮತದಾರರು ಇದ್ದರು ಎಂದು ನನಗೆ ತಿಳಿದಿಲ್ಲ, ಆದರೆ ಸುಮಾರು 2 ಸಾವಿರಕ್ಕೂ ಹೆಚ್ಚು ಜನ ಇದ್ದರು. ಯಾವ ಬಡಾವಣೆಗಳಲ್ಲಿ ಮತದಾರರ ವ್ಯತ್ಯಾಸ ಇತ್ತು ಎಂದು ತೋರಿಸಲು ನಾನು

ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಆ ಸಂಬಂಧ ಸಾರ್ವಜನಿಕರೂ ಸಹ ಚುನಾವಣಾ ಆಯೋಗಕ್ಕೆ ತಕರಾರು ಸಲ್ಲಿಸಿರುತ್ತಾರೆ. ಆ ರೀತಿ ಉಪಚುನಾವಣೆಗೆ ಪೂರ್ವದಲ್ಲಿಯೇ ತಕರಾರು ಸಲ್ಲಿಸಿರುತ್ತಾರೆ. ಉಪಚುನಾವಣೆಯ ಫಲಿತಾಂಶವನ್ನು ದಿ:26/11/2024 ರಂದು ಘೋಷಿಸಲಾಗಿದೆ ಎಂದರೆ ಸರಿ. ನಿ.ಪಿ.11 ಅನ್ನು ಸಾರ್ವಜನಿಕರು ದಿ:02/12/2024 ರಂದು ನೀಡಿರುತ್ತಾರೆ ಎಂದರೆ ಸರಿ. ಅದನ್ನು ಬಿಜೆಪಿ ಪಕ್ಷದ ಕಾರ್ಯಕರ್ತರು ನೀಡಿರುತ್ತಾರೆ ಎಂದರೆ ಸರಿ. ನಿ.ಪಿ.11ರಲ್ಲಿರುವ ಕೈಬರಹ ಒಂದೇ ಆಗಿರುತ್ತದೆ ಎಂದರೆ ಸರಿ. ನಿ.ಪಿ.11ರಲ್ಲಿರುವ ಮತದಾರರ ಹೆಸರಿನ ಪಕ್ಕದಲ್ಲಿ ಯಾರ ಸಹಿಯೂ ಇರುವುದಿಲ್ಲ ಎಂದರೆ ಸರಿ. ಉಪಚುನಾವಣಾ ಫಲಿತಾಂಶ ಪ್ರಕಟ ಆದ ದಿವಸ ನಾನು ಅಧಿಕಾರಿಗಳಲ್ಲಿ ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. 2 ರಿಂದ 5ನೇ ಎದುರುದಾರರು ಸರ್ಕಾರಿ ಅಧಿಕಾರಿಗಳು ಎಂದರೆ ಸರಿ. ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗ ಸಿದ್ಧಪಡಿಸುತ್ತದೆ ಎಂದರೆ ಸರಿ. 2 ರಿಂದ 5ನೇ ಎದುರುದಾರರು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದಿಲ್ಲ ಎಂದರೆ ಸರಿ. ಪ್ರತಿವಾದಿ 2 ರಿಂದ 5 ಹಾಗೂ 1ನೇ ಪ್ರತಿವಾದಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೆಸರಿಸಿರುವ ಲಿಪ್ಸ ಎನ್ನುವವರು ಯಾರು ಎಂದು ನನಗೆ ತಿಳಿದಿಲ್ಲ.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**